# ಭಕ್ತಿಮಾರ್ಗದ ಬಗೆಗಳು

ಸ್ವಾಮಿ ಸುನಿರ್ಮಲಾನಂದ

ಭಗವಂತನೆಡೆಗೆ ಸಾಗಲು ಅನೇಕ ಮಾರ್ಗಗಳಿವೆ. ಅವುಗಳಲ್ಲಿ ಭಕ್ತಿಮಾರ್ಗವು ಅತ್ಯಂತ ಸುಲಭವೂ, ಆನಂದದಾಯಕವೂ ಆದ ಮಾರ್ಗವೆಂಬುದು ಹಲವು ಮಂದಿ ಮಹಾತ್ಮರುಗಳ ಅಭಿಮತ. ಈ ಭಕ್ತಿಮಾರ್ಗದಲ್ಲೂ ವೈವಿಧ್ಯಮಯವಾದ ಸಾಧನ ವಿಧಾನಗಳಿವೆ; ಹಲವು ಬಗೆಯ ಪರಂಪರೆಗಳಿವೆ. ಮಾನವ ಮನಸ್ಸುಗಳ ವೈವಿಧ್ಯತೆಗೆ ಅನುಗುಣವಾಗಿ ಈ ಮಾರ್ಗ, ಸಂಪ್ರದಾಯ, ವಿಧಾನಗಳನ್ನು ರೂಪಿಸಿರುವುದು ಮನುಕುಲದ ಆಧ್ಯಾತ್ಮಿಕ ಉನ್ನತಿಗೆ ಉಪಯುಕ್ತವಾಗಿದೆ. ಈ ಕುರಿತು ಇಲ್ಲಿ ವಿಶ್ಲೇಷಿಸಿರುವ ಲೇಖಕರು ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿದ್ದರು. ಪ್ರಸ್ತುತ ವೇದಾಂತ ಸೊಸೈಟಿ, ಹಾಲೆಂಡ್ ಇದರ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳೂ, ಲೇಖಕರೂ ಆಗಿರುವ ಇವರು ಆಂಗ್ಲ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ.

ಭಕ್ತಿ ಸಹಜ ಮಾರ್ಗ. ಎಲ್ಲರೂ ಭಕ್ತರಾಗಬಹುದು. ಹೆಚ್ಚೇನೂ ಮಾಡಬೇಕಿಲ್ಲ. ಸ್ಮರಣ-ಮನನ , ಜಪ, ಸೇವೆ, ಏನು ಸಾಧ್ಯವೋ ಅದನ್ನು ಮಾಡಿದರೆ ಭಗವಂತ ಸಂಪ್ರೀತನಾಗುತ್ತಾನೆ. ಈ ರೀತಿ ನಾವು ಶತಶತಮಾನಗಳಿಂದ ಕೇಳುತ್ತಿದ್ದೇವೆ. ಆದರೆ ಕೆಲವರಿಗೆ ಸಂದೇಹ. ''ಹಾಗಾದರೆ ಭಕ್ತಿ ಅಷ್ಟೊಂದು ಸುಲಭವೇನು? ನನ್ನ ಪ್ರಕಾರ ಭಗವಂತ ನಮ್ಮಂತಹ ಜನರ ಮಾತನ್ನು ಕೇಳುವುದೇ ಇಲ್ಲ. ನಾವು 'ದೇವರು ದೇವರು' ಅಂತ ಯಾವಾಗಲೂ ಹೇಳುತ್ತೇವೆ. ಮೊನ್ನೆ ಪ್ರವಾಸಕ್ಕೆ ಹೋಗಿದ್ದಾಗ ನಮ್ಮ ಹತ್ತಿರ ಇದ್ದ ನಾಣ್ಯಗಳನ್ನೆಲ್ಲಾ ಹುಂಡಿಗೆ ದಾನ ಮಾಡಿದ್ದೇವೆ. ಆದರೂ ಎಲ್ಲಿ ದೇವರು? ಮಗನ ಪ್ರಮೋಷನ್ ಅದೆಂ ದಿಗೆ ಆಗುತ್ತದೆಯೋ ಯಾರಿಗೆ ಗೊತ್ತು. ನಮ್ಮ ವಿಶ್ವಾಸ ಹಾರಿ ಹೋಗಿದೆ.'' ''ಅಯ್ಯೋ ನಿಮ್ಮ ಮಾತು ಹಾಗಿರಲಿ. ನಾವು ಕಾರಿನಲ್ಲಿ ಉತ್ತರಭಾರತ ಪ್ರವಾಸಕ್ಕೆ ಹೋಗಿದ್ದೆವು. ಬಾಡಿಗೆಯ ಕಾರು, ಸಾವಿ ರಾರು ರೂ. ಖರ್ಚು. ಎಲ್ಲರೂ ಟೂರಿಸ್ಟ್ ಸ್ಪಾಟ್, ಟೂರಿಸ್ಟ್ ಹಿಲ್ ಸ್ಟೇಷನ್, ಇತ್ಯಾದಿ ಹೇಳಿದರೂ ನಾನು ಜೋರು ಮಾಡಿ ಒಂದು ಮಂದಿರಕ್ಕೆ ಹೋಗೋಣ ಎಂದು ಹೇಳಿದೆ. ಪೂಜೆಗೆ ನಾನು ೨೦ ರೂಪಾಯಿ ಕೊಟ್ಟೆ. ಪೂಜಾರಿಗಳು ಸರಿಯಾಗಿ ಪ್ರಸಾದ ಕೂಡ ಕೊಡ ಲಿಲ್ಲ. ಇಷ್ಟೆಲ್ಲಾ ಮಾಡಿದರೂ ಹಿಂದೆ ಬರುವಾಗ ಟೈರ್ ಪಂಕ್ಚರ್. ಎಲ್ಲರೂ ಹಾಸ್ಯ ಮಾಡಿದರು. ನಿನ್ನ ಭಕ್ತಿಯ ಪರಿಣಾಮ ನೋಡಿ ದೆಯಾ? ನಿನ್ನ ದೇವರು ಪಂಕ್ಚರ್ ಮಾಡಿಬಿಟ್ಟ.''

**ಸಾಧಾರಣ ಭಕ್ತಿ :** ಭಕ್ತಿಯಲ್ಲಿ ಹಲವು ವಿಧ. ಅವುಗಳಲ್ಲಿ ಒಂದು ಸಾಧಾರಣ ವಿಧದ ಭಕ್ತಿ ಎಲ್ಲರೂ ಅಭ್ಯಾಸ ಮಾಡುವಂತಹುದು. ಇದರ ಹೆಸರೇ ಸಾಮಾನ್ಯ ಭಕ್ತಿ ಅಥವಾ ಗೌಣ ಭಕ್ತಿ. ಸಹಜ ಸರಳವಾದುದು, ಎಲ್ಲರಿಗೂ ಅಭ್ಯಾಸ ಮಾಡಲು ಸಾಧ್ಯ. ಏನಿದು ಸಾಮಾನ್ಯ ಭಕ್ತಿ? ನೀವು ಅಂಗಡಿಗಳಲ್ಲಿ ನೋಡಿರಬಹುದು. ಅಂಗಡಿಯ ಬಾಗಿಲು ತೆಗೆದ ತಕ್ಷಣ ಅಂಗಡಿಯ ಮಾಲೀಕರು ಎರಡು ಊದು ಬತ್ತಿ ಹಚ್ಚಿ ದೇವತೆಗಳ ಫೋಟೋ ಮುಂದೆ ತೋರಿಸಿ, ಕ್ಯಾಶ್ ಬಾಕ್ಸ್‌ಗೆ ಕೂಡ ಧೂಪವನ್ನು ತೋರಿಸಿ, ನಂತರ ಅದನ್ನು ಆರಿಸಿ ಬಿಡುತ್ತಾರೆ. ಈ ಭಕ್ತಿಯಲ್ಲಿ ಒಂದೇ ಉದ್ದೇಶ, ಅಂಗಡಿಯ ವ್ಯಾಪಾರ ಚೆನ್ನಾಗಿ ನಡೆಯಲಿ ಎಂಬುದು. ಸಾಮಾನ್ಯ ಭಕ್ತಿ ಸಾಧಾರಣವಾಗಿ ನಾವುಗಳು ದೇವರೆಡೆಗೆ ತೋರಿಸುವ ಭಕ್ತಿ. ಮಗನಿಗೆ ಕೆಲಸವಿಲ್ಲ, ಒಳ್ಳೆಯ ಕೆಲಸವಾಗಲಿ, ಮಗಳಿಗೆ ಒಳ್ಳೆಯ ಗಂಡ ಸಿಗಲಿ, ಹಣದ ಅಡಚಣೆ ಕಡಿಮೆಯಾಗಲಿ, ಇತ್ಯಾದಿ ಕಾರಣಕ್ಕಾಗಿ ಮನೆಯಲ್ಲಿ ಒಂದು ಚಿಕ್ಕ ಪೂಜೆ ಅಥವಾ ಆರಾಧನೆಯ ವ್ಯವಸ್ಥೆ ಮಾಡುವುದು. ಇದು ಸಾಮಾನ್ಯ ಭಕ್ತಿ. ಸ್ವಲ್ಪ ಮೇಲಿನ ಹಂತದ ಸಾಮಾನ್ಯ ಭಕ್ತಿ ಎಂದರೆ ತಮ್ಮ ಪುತ್ರ ಅಥವಾ ಪುತ್ರಿಗೆ ರೋಗಾದಿಗಳು ಬಂದಾಗ, ಕಷ್ಟಗಳು ಬಂದಾಗ ತಾಯಿ ಕಣ್ಣೀರು ತುಂಬಿ ಭಗವಂತನನ್ನು ಕೇಳುವುದು: ''ಹೇ ದೇವ! ನನ್ನ ಮಗನನ್ನು ಅಥವಾ ಮಗಳನ್ನು ಕಾಪಾಡು'' ಎಂಬುದು. ಇದೂ ಭಕ್ತಿಯೇ. ಭಕ್ತಿಯಲ್ಲಿ ನಾನಾ ಪ್ರಕಾರಗಳು, ವಿಧಗಳು. ಆದರೆ ಭಕ್ತಿ ಎಂದರೆ ಅಷ್ಟೇ, ಇಷ್ಟುಮಾತ್ರವೇ, ಎಂದು ಭಾವಿಸಿದರೆ ತಪ್ಪು.

ಈ ರೀತಿಯ ಸಾಮಾನ್ಯ, ಗೌಣ, ಭಕ್ತಿ ನಾನಾ ರೀತಿಯಲ್ಲಿ ನಮ್ಮ ಜೀವನಗಳಲ್ಲಿ ಪ್ರಕಟವಾಗುತ್ತದೆ. ನಾವು ಸಾಧಾರಣ ಮನುಷ್ಯರು. ಭಗವಂತನಲ್ಲಿ ನಮ್ಮ ಭಕ್ತಿ ನಮ್ಮ ಸಂಸಾರದ, ಪರಿವಾರದ, ಜನರ ಹಿತ ಸುಖ ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಬಹಳ ಒಳ್ಳೆಯದು. ಈ ರೀತಿಯ ಭಕ್ತಿ ಖಂಡಿತ ಆವಶ್ಯಕ. ಆದರೆ ಭಕ್ತಿ ಇಲ್ಲಿಗೇ ಸೀಮಿತವಾದರೆ ಕಷ್ಟ. ಇದು ಕೇವಲ ಪ್ರಾರಂಭದ ಹಂತ. ಈ ಪ್ರಾರಂಭದ ಹಂತವನ್ನು ಎಷ್ಟು ಬೇಗ ದಾಟಬಹುದೋ ಅಷ್ಟು ಒಳ್ಳೆಯದು. ಏಕೆ? ಈ ''ಇದು ಬೇಕು ಅದು ಬೇಕು'' ಎಂಬ ಸಾಮಾನ್ಯ ಭಕ್ತಿ ತಪ್ಪೋ ಸರಿಯೋ ಎಂಬುದು ತಾತ್ತ್ವಿಕ ಪ್ರಶ್ನೆ. ಅದರ ಉತ್ತರ ಏನೆಂದು ಆಮೇಲೆ ನೋಡೋಣ. ಆದರೆ ಮತ್ತೊಂದು ಪ್ರತಿಕ್ರಿಯೆಯಿಂದ ನಾವು ಈ ಭಕ್ತಿಯ ಆಳ, ಗಾಂಭೀರ್ಯಗಳನ್ನು ತಿಳಿಯಬಹುದು. ಏನು ಆ ಪ್ರತಿಕ್ರಿಯೆ? ಲೇಖನದ ಮೊದಲು ಓದಿದಂತೆ ನಾವು ಈಶ್ವರನಲ್ಲಿ ಸಾಮಾನ್ಯ ಭಕ್ತಿ ತೋರಿಸುವಾಗ ಅದರ ಹಿಂದೆ ಒಂದು ಕಾರಣವಿರುತ್ತದೆ, ಒಂದು ಆಕಾಂಕ್ಷೆ, ಒಂದು ಡಿಮ್ಯಾಂಡ್ ಇರುತ್ತದೆ. ನಮ್ಮ ಅಪ್ರಬುದ್ಧತೆಯ ಕಾರಣ ನಾವು ಈ ಆಕಾಂಕ್ಷೆಗಳನ್ನು ದೇವರು ಒಂದು ಮುಹೂರ್ತದಲ್ಲಿಯೇ ಈಡೇರಿಸುತ್ತಾನೆ ಎಂದು ಭಾವಿಸುತ್ತೇವೆ. ನಮ್ಮ ತಪ್ಪು ತಿಳುವಳಿಕೆ ಏನು ಎಂದರೆ ಮಂದಿರಕ್ಕೆ ಹೋಗಿ ಹುಂಡಿಯಲ್ಲಿ ಕೆಲವು ನಾಣ್ಯಗಳನ್ನು ಹಾಕಿ, ''ನನಗೆ ಹೊಸ ಕಾರು ಬೇಕು'' ಎಂದು ಬೇಡಿದ ನಂತರ ಮಂದಿರದಿಂದ ಹೊರಗೆ ಬಂದಾಗ ಹೊಸ ಕಾರು ನಿಂತಿರುತ್ತದೆ ಎಂದು ಆಶಿಸುತ್ತೇವೆ. ಅಥವಾ, ನಾವು ಕೇಳಿದ ತಕ್ಷಣ ATM ನಲ್ಲಿ ಹಣ ಬೀಳುವಂತೆ ಭಗವಂತ ತನ್ನ ಕಾರ್ಯದಕ್ಷತೆಯನ್ನು ತೋರಿಸುತ್ತಾನೆ ಎಂದು ಬಯಸುತ್ತೇವೆ. ನಾವು ದೇವರನ್ನು ಕೇಳಿಕೊಂಡ ನಂತರ ಮರುಕ್ಷಣದಲ್ಲಿಯೇ ಮನೆಯಲ್ಲಿ ಎಲ್ಲ

ವೂ ಒಳ್ಳೆಯದಾಗುತ್ತದೆ, ಅಂಗಡಿಯಲ್ಲಿ ವ್ಯಾಪಾರ ಚೆನ್ನಾಗಿ ಆಗುತ್ತದೆ, ಆರೋಗ್ಯ ಸರಿಯಾಗುತ್ತದೆ, ಇತ್ಯಾದಿ ನಮ್ಮ ಕಲ್ಪನೆ. ಏನಾದರೂ ಹಾಗಾಗದಿದ್ದಲ್ಲಿ ಭಗವಂತನಲ್ಲಿನ ನಮ್ಮ ವಿಶ್ವಾಸ ಬಿರುಗಾಳಿಯಲ್ಲಿನ ಗಿಡದಂತೆ ಓಲಾಡಲು ಶುರುವಾಗುತ್ತದೆ. ''ಅಯ್ಯೋ ನಾವು ಬೇಕಾದಷ್ಟು ಕೇಳಿದ್ದೇವೆ! ಎಷ್ಟೊಂದು ಪೂಜೆ ಪುನಸ್ಕಾರ, ದಿನರಾತ್ರಿ ದೇವರು ದೇವರು ಅಂತ. ಆದರೆ ದೇವರು ನಮ್ಮ ಮೇಲೆ ಕೃಪೆ ಮಾಡಲಿಲ್ಲ.'' ಇದು ಸಾಮಾನ್ಯ ಭಕ್ತಿ. ಇದು ಒಂದು ರೀತಿಯ ವ್ಯಾಪಾರ. ಈ ಭಕ್ತಿ ಹುಟ್ಟುವುದು ಒಂದು ಕಾರಣಕ್ಕಾಗಿ ಮತ್ತು ಅಂತರ್ಧಾನವಾಗುವುದು ಒಂದು ನೆಪದಿಂದಾಗಿ.

ಆದರೆ ಒಂದು ಗುಟ್ಟು ಗೊತ್ತೇನು? ಭಗವಂತನಲ್ಲಿ ವಿಶ್ವಾಸ ಹೊರಟುಹೋಯಿತು ಎಂದರೂ ಆ ವಿಶ್ವಾಸ ಹೋಗುವುದಿಲ್ಲ. ಮತ್ತೊಂದು ದಿನ, ಮತ್ತೊಂದು ಕಾರಣಕ್ಕಾಗಿ ಈಶ್ವರನಲ್ಲಿ ಪ್ರಾರ್ಥನೆ ನಡೆಯುತ್ತದೆ. ಹಾಗಾಗಿ ಸಾಮಾನ್ಯ ಭಕ್ತಿ ಅತಿ ಸಾಮಾನ್ಯವೇನಲ್ಲ. ಸಾಮಾನ್ಯ ಅಥವಾ ಗೌಣ ಭಕ್ತಿ ನರ್ಸರಿ ಶಾಲೆ ಇದ್ದ ಹಾಗೆ. ನಾವು ಏನೇ ಹೇಳಿದರೂ, ನಾವು ನಾಸ್ತಿಕರೆಂದು ಘೋಷಿಸಿದರೂ ಒಳಗಿರುವ ದೇವರಲ್ಲಿನ ವಿಶ್ವಾಸ ಅತಿ ಸಹಜವಾಗಿ ಮಾಯವಾಗುವುದಿಲ್ಲ. ಇದು ಈ ಜಗತ್ತಿನ ಪರಮಾಶ್ಚರ್ಯ. ಜಗತ್ತಿನಲ್ಲಿ ತಾವು ನಾಸ್ತಿಕರು ಎಂದು ಡಂಗುರ ಹೊಡೆಯುವ ಜನರ ಸಮಸ್ಯೆ ನಾಸ್ತಿಕತೆ ಅಲ್ಲ, ಅಹಂಕಾರ. ಅವರ ಪ್ರಚಂಡ ಅಹಂಕಾರ ಅವರ ಕಣ್ಣುಗಳನ್ನು ಮುಚ್ಚಿರುತ್ತದೆ. ಒಣ ತರ್ಕ, ಮೂರ್ಖ ಪ್ರಶ್ನೆಗಳು, ಅಪ್ರಾಸಂಗಿಕ quotationಗಳ ಬಳಕೆ, ಇವೆಲ್ಲ ನಾಸ್ತಿಕತೆಯ ಲಕ್ಷಣವಲ್ಲ, ಅಹಂಕಾರದ ಲಕ್ಷಣ. ಅಹಂಕಾರ ಒಂದು ಬೆಲೂನ್ ಇದ್ದಹಾಗೆ. ಗಾಳಿ ತುಂಬಿದಂತೆ ಬೆಲೂನು ದೊಡ್ಡದಾಗುತ್ತಾ ಹೋಗುತ್ತದೆ. ಆದರೆ ಅದಕ್ಕೂ ಒಂದು ಎಲ್ಲೆಯಿದೆ. ಹೆಚ್ಚಾದರೆ ಬೆಲೂನು ಒಡೆದು ಚೂರಾಗುತ್ತದೆ. ನೈಜ ನಾಸ್ತಿಕತೆ ಎಂದರೆ ನಿರಹಂಕಾರ, ವಿನಯ, ವಿಷಯಗಳನ್ನು ತಿಳಿದುಕೊಳ್ಳುವ ಆಸೆ. ನಿಜವಾದ ನಾಸ್ತಿಕರು ಬಹಳ ವರ್ಷ ಒಂದು ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿರಬಹುದು. ಆದರೆ ಅದಕ್ಕೆ ವಿರುದ್ಧವಾದ ಸಾಕ್ಷಿಗಳು ಸಿಕ್ಕರೆ ಅವರು ಆ ನಂಬಿಕೆಯನ್ನು ಬಿಡಲು ಸಿದ್ಧ. ಇದು ನಿಜವಾದ ನಾಸ್ತಿಕತೆ. ಮತ್ತೆಲ್ಲಾ ಬರಿ ಒಣ ಜಂಬ, ಅಹಂಕಾರ, ಒಳಗೆ ಮೂರ್ಖತನ. ಅದು ಹಾಗಿರಲಿ, ಸಾಮಾನ್ಯ ಭಕ್ತಿ ಯಾರಲ್ಲಿ ಇದೆಯೋ ಅವರ ಒಳಗೆ ಸ್ವಲ್ಪವಾದರೂ ಸುಪ್ತವಾಗಿ ದೈವ ಭಕ್ತಿ ಇದ್ದೇ ಇರುತ್ತದೆ. ಒಂದು ಸಮಸ್ಯೆ ಬಂದಾಗ ಪರಿಹಾರ ತಕ್ಷಣ ಬರಲಿಲ್ಲ ಎಂದು ದೇವರನ್ನು ಹಳಿಯಬಹುದು, ಆದರೆ ಮತ್ತೊಂದು ಸಮಸ್ಯೆ ಬಂದಾಗ ಮತ್ತೊಮ್ಮೆ ''ದೇವರೇ ನಮ್ಮನ್ನು ರಕ್ಷಿಸು'' ಎಂದು ಕೇಳುತ್ತಾರೆ. ಹೀಗೆ ಜೀವನ ಮುಂದೆ ಹೋದಂತೆ ಮೆಲ್ಲನೆ ನಮ್ಮ ಮನಸ್ಸಿನಲ್ಲಿ ಈಶ್ವರನ ಚಿಂತೆ ಇನ್ನೂ ಹೆಚ್ಚು ಹೆಚ್ಚಾಗಿ ಪ್ರಕಾಶಿಸುತ್ತದೆ. ಗೌಣ, ಸಾಮಾನ್ಯ ಭಕ್ತಿ ಸ್ವಲ್ಪಸ್ವಲ್ಪವಾಗಿ ಪರಿಪಕ್ವವಾಗುತ್ತದೆ. ಮುಂದಿನ ಹಂತದ ಭಕ್ತಿಯ ವಿಷಯವನ್ನು ಓದುವ ಮೊದಲು ನಾವು ಈ ಸಾಮಾನ್ಯ ಭಕ್ತಿಯ ಸಮಸ್ಯೆಯನ್ನು ತಿಳಿಯೋಣ.

ನಮ್ಮ ಸುತ್ತಮುತ್ತಲು ಎಲ್ಲೆಲ್ಲೂ ಕಾಣುವ ಈ ಸಾಮಾನ್ಯ ಭಕ್ತಿಯ ಅಭಿವ್ಯಕ್ತಿಯಲ್ಲಿ ಎರಡು ದೊಡ್ಡ ತೊಂದರೆಗಳಿವೆ. ಮೊದಲನೆಯದಾಗಿ ಹೆಚ್ಚಿನ ಈ ರೀತಿಯ ಸಾಮಾನ್ಯ ಭಕ್ತರಲ್ಲಿ ತಾಳ್ಮೆ ಇರುವುದಿಲ್ಲ, ಪ್ರಬುದ್ಧತೆ ಇರುವುದಿಲ್ಲ, ಕೇವಲ ಭಾವುಕತೆ, emotion. ಇಂದು ಮಂದಿರಕ್ಕೆ ಹೋಗಿ, ''ನನಗೆ ಇದನ್ನು ಕೊಡು, ಈ ರೀತಿ ಮಾಡು'' ಎಂದು ಹೇಳಿದ ಮರುಕ್ಷಣವೇ ನಾವು ಕೇಳಿದ ವಸ್ತು ನಮಗೆ ದೊರಕಿಬಿಡಬೇಕು. ಇಲ್ಲದಿದ್ದರೆ ದೇವರು ವ್ಯರ್ಥ ಎಂದು ಭಾವಿಸುವುದು ಅಪ್ರಬುದ್ಧತೆ. ನಮ್ಮ ಸಮಾಜದ ಅತಿ ದೊಡ್ಡ ಸಮಸ್ಯೆ ಅಪ್ರಬುದ್ಧತೆ – immaturity.

ಹಾಗಾಗಿ, ಭಕ್ತಿಮಾರ್ಗ ಸಹಜವಾದರೂ, ಸರಳವಾದರೂ, ಆ ಮಾರ್ಗದಲ್ಲಿ ಕೂಡ ಕೆಲವು ಅತಿ ಸಾಧಾರಣ ಹಂತಗಳು ಅಥವಾ ನಿಯಮಗಳಿವೆ. ನಿಮ್ಮ ಮಗು ನರ್ಸರಿಗೆ ಹೋದರೆ ಅಲ್ಲಿ ಕೂಡ ಒಂದೆರಡು ಸಣ್ಣ ಸಣ್ಣ ನಿಯಮಗಳು ಇದ್ದೇ ಇರುತ್ತವೆ. ಪ್ರಾರ್ಥನೆ ಮಾಡಬೇಕೆಂದರೂ ಒಂದೆರಡು ಗುಣಗಳಿರಬೇಕು. ಇದನ್ನೇ ನಮ್ಮ ಹಿಂದೂ ಶಾಸ್ತ್ರಗಳು ಹೇಳಿಕೊಡುವುದು. ಎಲ್ಲಿ ಅಂದರೆ ಎಲ್ಲಿ ಎಲ್ಲರೂ ಕುಳಿತು ಅಥವಾ ನಿಂತು, ಆಹಾ ಊಹೂ ಎಂದು ಎರಡು ನಿಮಿಷ ಅನ್ಯಮನಸ್ಕರಾಗಿ ಶಬ್ದ ಮಾಡಿಬಿಟ್ಟರೆ ಅದು ಪ್ರಾರ್ಥನೆ ಆಗಿಬಿಡುವುದಿಲ್ಲ. ಪರಮೇಶ್ವರನೊಂದಿಗೆ ನಮ್ಮ ಸಂಪರ್ಕ ಆ ರೀತಿಯ ಎರಡು ನಿಮಿಷದ ಬಾಲಿಶ ವ್ಯಾಯಾಮದಿಂದ ಆಗುವುದಿಲ್ಲ. ಸ್ವಲ್ಪ ಪ್ರಬುದ್ಧತೆ ಬೇಕು. ಪ್ರಾರ್ಥನೆ ಅಥವಾ ಪೂಜೆ ಒಂದು ಆಟವಲ್ಲ, ವ್ಯಾಪಾರವಲ್ಲ. ಅದು ಗಂಭೀರವಾದ ಕಾರ್ಯ. ಪ್ರತಿನಿತ್ಯದ, ದೈನಂದಿನ ವಸ್ತು–ವಿಷಯಗಳಿಗಾಗಿ ಈಶ್ವರನನ್ನು ಪ್ರಾರ್ಥಿಸುವುದು ನರ್ಸರಿ ಆದರೂ ಅದರ ಆವಶ್ಯಕತೆ ಇದೆ, ಏಕೆಂದರೆ ಅದು ಭಗವಂತನ ಬಗ್ಗೆ ಕುತೂಹಲ, ಪ್ರಶ್ನೆಗಳನ್ನು ಮನಸ್ಸಿನಲ್ಲಿ ಜಾಗೃತಗೊಳಿಸುತ್ತದೆ. ಆದರೆ ಸಾಮಾನ್ಯ ಭಕ್ತಿಯಿಂದ ನಮ್ಮ ಜೀವನ ಅಥವಾ ಆಧ್ಯಾತ್ಮಿಕ ಜೀವನ ಪ್ರಾರಂಭವಾದರೂ ಸಾಮಾನ್ಯ ಭಕ್ತಿಯೇ ಅಂತಿಮ ಹಂತವಲ್ಲ. ಸಾಮಾನ್ಯ ಭಕ್ತಿ ಎಂಬುದು ವಿಶಾಲವಾದ ಭಕ್ತಿಯೆಂಬ ಅರಮನೆಯ ಮೊದಲನೆಯ ಗೇಟ್. ಸಾಮಾನ್ಯ ಭಕ್ತಿ ಮತ್ತೆ ಮತ್ತೆ ನಮ್ಮನ್ನು ಭಗವಂತನನ್ನು ನೆನೆಯುವಂತೆ ಮಾಡುತ್ತದೆ.

**ಉತ್ತಮಾ ಭಕ್ತಿ :** ಸಾಮಾನ್ಯ ಭಕ್ತಿಯ ಮುಂದಿನ ಹಂತ '**ಉತ್ತಮಾ ಭಕ್ತಿ.**' ನಮ್ಮ ಶಾಸ್ತ್ರಗಳು ಉತ್ತಮಾ ಭಕ್ತಿಯನ್ನು ಉನ್ನತ ಸ್ಥಾನದಲ್ಲಿ ನಿಲ್ಲಿಸಿವೆ. ಉತ್ತಮಾ ಭಕ್ತಿ ಎಂದು ಕರೆಯಲ್ಪಡುವ ಈ ಭಕ್ತಿಗೆ ಅರ್ಹರಾಗಲು ಒಂದೆರಡು ಚಿಕ್ಕ ಚಿಕ್ಕ ಪ್ರಾರಂಭದ ಹೆಜ್ಜೆಗಳನ್ನು ಇಡಬೇಕು. ಭಕ್ತಿಮಾರ್ಗ ಎಲ್ಲರಿಗೂ ಇರುವಂಥದು, ನಿಜ. ಭಕ್ತಿಮಾರ್ಗದಲ್ಲಿ ಎಲ್ಲರಿಗೂ ಪ್ರವೇಶವಿದೆ, ನಿಜ. ಆದರೆ ಅಪ್ರಬುದ್ಧರಾದ ನಮ್ಮಂತಹ ಸಾಧಾರಣ ವ್ಯಕ್ತಿಗಳು ಫಲವನ್ನು ಪ್ರಾರ್ಥನೆ ಮಾಡುವುದಕ್ಕೂ ಮೊದಲೇ ಪಡೆಯಲು ಆಶಿಸುತ್ತೇವೆ, ಫಲ ಬರದಿದ್ದಾಗ ನಿರಾಶರಾಗುತ್ತೇವೆ. ಇದು ದೊಡ್ಡ ಅಡಚಣೆ.

ಉತ್ತಮಾ ಭಕ್ತಿಯನ್ನು ಅಭ್ಯಾಸ ಮಾಡಬೇಕಾದರೆ ನಮ್ಮ ಶಾಸ್ತ್ರಗಳು ಮೊದಲು ಶ್ರದ್ಧೆ ಇರಲಿ ಎನ್ನುತ್ತವೆ. **ಆದೌ ಶ್ರದ್ಧಾ, ತತಃ ಸಾಧುಸಂಗಃ, ತತಃ ಅನರ್ಥ ನಿವೃತ್ತಿಃ.** ಇದು ಉತ್ತಮಾ ಭಕ್ತಿಯ ಕ್ರಮ. ಮೊದಲು ಶ್ರದ್ಧೆ ಇರಬೇಕು. ನೆನಪಿರಲಿ, ಶ್ರದ್ಧೆ ಎಂದರೆ ಬರಿಯ ವಿಶ್ವಾಸವಲ್ಲ. ''ನಮ್ಮ ದೇವರಲ್ಲಿ ವಿಶ್ವಾಸ ಇಡಬೇಕು. ಇಲ್ಲದೆ ಹೋದರೆ ನಿನ್ನ ತಲೆ ಕತ್ತರಿಸುತ್ತೇವೆ'' ಎಂಬ ಧರ್ಮ ನಮ್ಮದಲ್ಲ. ಈ ರೀತಿಯ ಧರ್ಮ ಅಲ್ಲ ನಮ್ಮ ಪವಿತ್ರ, ವೈಜ್ಞಾನಿಕ ಸನಾತನ ಧರ್ಮ. ಸನಾತನ ಧರ್ಮದಲ್ಲಿ ನಂಬಿಕೆಗೆ ಕಡಿಮೆ ಬೆಲೆ, ಜಿಜ್ಞಾಸಾ ಅಥವಾ ಪರೀಕ್ಷೆ, ಅನ್ವೇಷಣೆಗಳಿಗೆ ಹೆಚ್ಚಿನ ಬೆಲೆ. ವಿಶ್ವಾಸ ಎಂದರೆ ಬರಿ ನಂಬಿಕೆ.

ಶ್ರದ್ಧೆ ಎಂದರೆ ವಿಶ್ವಾಸದೊಂದಿಗೆ ಗುರಿ ಮುಟ್ಟುವ ತನಕ ಮಾಡುವ ಸಾಧನೆ. ಆಧ್ಯಾತ್ಮಿಕ ಜಗತ್ತಿನ ಪ್ರಥಮ ಸೋಪಾನ ಶ್ರದ್ಧೆ – ಅದು ಜ್ಞಾನಮಾರ್ಗವಿರಲಿ, ಭಕ್ತಿಮಾರ್ಗವಿರಲಿ.

ಶ್ರದ್ಧೆಯ ಮಹತ್ವವೇನು? 'ನಾನು ನನ್ನ ಹತ್ತಿರ ಇದ್ದ ನಾಣ್ಯಗಳನ್ನೆಲ್ಲಾ ಹುಂಡಿಗೆ ಹಾಕಿದೆ, ಎರಡು ಅಗರಬತ್ತಿಗಳನ್ನು ಹಚ್ಚಿದೆ, ಆದರೇನು ಫಲ, ದೇವರು ನಮಗೆಲ್ಲ ಒಲಿಯುವುದೇ ಇಲ್ಲ' – ಇದು ಶ್ರದ್ಧಾಹೀನತೆಯ ಪ್ರಥಮ ಸಂಕೇತ. ಶ್ರದ್ಧೆ ಇದ್ದರೆ ಎರಡು ಅಗರ ಬತ್ತಿಯಲ್ಲ, ಪ್ರತಿದಿನ ಇನ್ನೂರು ಅಗರಬತ್ತಿ ಹಚ್ಚಿದರೂ ಸಾಲದು ಎಂಬ ಭಾವನೆ ಇರುತ್ತದೆ. ಶ್ರದ್ಧೆ ಇದ್ದರೆ, ಭಗವಂತ ನಮ್ಮನ್ನು ರಕ್ಷಿಸಿಯೇ ರಕ್ಷಿಸುತ್ತಾನೆ. ಭಗವಂತನಿಗೆ ಏನು ಮಾಡಬೇಕು, ಯಾರಿಗೆ ಯಾವುದನ್ನು ನೀಡಬೇಕು, ಏನು ಭಗವಂತನ ಮುಂದಿನ ಹೆಜ್ಜೆ, ಎಂದು ತಿಳಿಸಿಕೊಡಬೇಕಿಲ್ಲ. ನಮಗೆ ಯಾವುದು ಒಳ್ಳೆಯದು ಎಂಬುದು ಭಗವಂತನಿಗೆ ಚೆನ್ನಾಗಿ ಗೊತ್ತು. ನಮ್ಮ ಕರ್ತವ್ಯ ಭಗವಂತನನ್ನು ನೆನೆದುಕೊಳ್ಳುವುದು, ಸ್ಮರಿಸುವುದು, ಇತ್ಯಾದಿ ಸತ್ ಚಿಂತನೆಗಳು ಮನಸ್ಸಿನಲ್ಲಿ ಬರುತ್ತವೆ. ಭಗವಂತನಲ್ಲಿ ಸಂಶಯವೇ ಇರುವುದಿಲ್ಲ. ಇದಕ್ಕೆ ಸಹಜವಾಗಿಯೇ ಸ್ವಲ್ಪ ಪ್ರಬುದ್ಧತೆ ಬೇಕು. ಸಾಧಾರಣ ವ್ಯಕ್ತಿಗಳು ವ್ಯಾಪಾರ-ವ್ಯವಸಾಯಗಳಲ್ಲಿ ಕೊಡು, ತೆಗೆದುಕೋ, ಹಣ ಕೊಡು, ವಸ್ತುವನ್ನು ತೆಗೆದುಕೋ, ಎಂಬ ವ್ಯಾಪಾರಿ ಮನೋಭಾವವನ್ನು ತೋರಿಸುತ್ತಾರೆ, ಆದರೆ ಅದೇ ಮನೋವೃತ್ತಿಯನ್ನು ಭಗವಂತನ ಮೇಲೂ ಆರೋಪಿಸಲು ಪ್ರಯತ್ನಿಸುತ್ತಾರೆ. ಇಂಥವರ ಭಕ್ತಿ ಎಷ್ಟು ಆಡಂಬರಪೂರ್ಣವೋ, ಎಷ್ಟು ಬೇಗ ಅಥವಾ ಹಠಾತ್ತಾಗಿ ಹುಟ್ಟುವುದೋ, ಅಷ್ಟೇ ಹಠಾತ್ತಾಗಿ ನಂದಿಹೋಗಿಬಿಡುತ್ತದೆ. ಇದರಿಂದ ಹೆಚ್ಚು ಪ್ರಯೋಜನವಾಗದೆ ಇದ್ದರೂ ಸಂಸ್ಕಾರ ಮನಸ್ಸಿನಲ್ಲಿ ಊರ್ಜಿತವಾಗುತ್ತದೆ. ಭಗವದ್ಗೀತೆಯಲ್ಲಿ ಕೃಷ್ಣ ಹೇಳುವಂತೆ **ಸ್ವಲ್ಪಮಪಿ ಅಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್**, ಭಗವಂತನಿಗಾಗಿ ಒಂದು ಸ್ವಲ್ಪ ಸತ್ಕರ್ಮ ಸಚ್ಚಿಂತನೆ ಮಾಡಿದರೂ ಅವನ ಕೃಪೆ ಖಂಡಿತಾ ಉಂಟಾಗುತ್ತದೆ. ಆದರೆ ಭಗವಂತನ ಕೃಪೆಗೆ ದೊಡ್ಡ ವಿಘ್ನ ನಮ್ಮದೇ ಮನಸ್ಸು, ನಮ್ಮದೇ ಪೂರ್ವಸಂಸ್ಕಾರಗಳು ಇತ್ಯಾದಿ. ಪೂರ್ವಸಂಸ್ಕಾರಗಳು ಎಂದರೇನು? ಬಹು ಬಹು ಜನ್ಮಗಳಲ್ಲಿ ನಾವು ಮಾಡಿರುವ ಪ್ರತಿಯೊಂದು ಚಿಂತನೆ, ಆಡಿರುವ ಪ್ರತಿಯೊಂದು ಮಾತು, ಆಚರಿಸಿರುವ ಪ್ರತಿಯೊಂದು ಕಾರ್ಯದ ಪರಿಣಾಮದ ಬೀಜಗಳು. ಅವುಗಳನ್ನು ಪರಿಶುದ್ಧ ಮಾಡಲು ಸ್ವಲ್ಪ ಸಮಯ ನೀಡಬೇಕು.

ಈ ಪರಿಶುದ್ಧಿಗಾಗಿ ಏನು ಮಾಡಬೇಕು? ಶ್ರದ್ಧೆ ಎಂದರೆ ಭಗವಂತನಲ್ಲಿ ಸಂಪೂರ್ಣ ವಿಶ್ವಾಸ ಮತ್ತು ಅವನ ಬಗ್ಗೆ ತಿಳಿಯುವ ಪ್ರಚಂಡ ಆಕಾಂಕ್ಷೆ. ಶ್ರದ್ಧೆ ಮತ್ತು ಸಾಧುಸಂಗ. ಸಾಧುಗಳ ಸಂಪರ್ಕಕ್ಕೆ ಬಂದರೆ ನಮಗೆ ಈಶ್ವರನ ಬಗ್ಗೆ ವಿಶ್ವಾಸ ದೃಢವಾಗುತ್ತದೆ. ಅವರ ಹತ್ತಿರ ನಾವು ಕೇಳುವುದು ಸತ್ಕಥೆ, ಸಚ್ಚಿಂತನೆ, ಸದಾಚಾರ, ಭಗವದ್ವಿಚಾರ ಇತ್ಯಾದಿ ವಿಷಯಗಳು. ಸಾಧುಗಳೆಂದರೆ ಭಕ್ತರೂ ಕೂಡ. ಭಕ್ತರ ಜೊತೆ ಮಾತುಕತೆಯಾದರೆ ಈಶ್ವರನ ಮಹಿಮೆಯ, ಗುಣಕೀರ್ತನೆಗಳ ಶ್ರವಣ. ಭಗವಂತನ ಬಗ್ಗೆ ಅದೆಷ್ಟು ಕೇಳುತ್ತೇವೆಯೋ ಅಷ್ಟೇ ಪುಣ್ಯಲಾಭ, ಅಷ್ಟೇ ಆನಂದ, ಅಷ್ಟೇ ಶಾಂತಿ ಮತ್ತು ಕುಸಂಸ್ಕಾರಗಳ ನಾಶ. ಇವುಗಳನ್ನು ಮತ್ತೆ ಮತ್ತೆ ಕೇಳಿದಷ್ಟೂ ನಮ್ಮ ಮನಸ್ಸಿನ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗಿ ಒಳ್ಳೆಯ ಸಂಸ್ಕಾರಗಳು ಜಾಗೃತವಾಗುತ್ತವೆ. ಎಷ್ಟೋ ಜನ್ಮಗಳಲ್ಲಿ ಎಷ್ಟೋ ಚಿಂತನೆ, ಎಷ್ಟೋ ಕುಕರ್ಮ, ಎಷ್ಟೋ ಕೆಟ್ಟ ಮಾತುಗಳು ಇದೇ ಮನಸ್ಸಿನಿಂದ ಉತ್ಪನ್ನವಾಗಿವೆ, ಎಲ್ಲವೂ ಬೀಜರೂಪದಲ್ಲಿ ಸಂಸ್ಕಾರವಾಗಿ ಮನಸ್ಸಿನಲ್ಲಿ ಇವೆ. ಸಾಧುಸಂಗದಿಂದ ಈ ಬೀಜಗಳು ಸುಟ್ಟು ಹೋಗಲು ಶುರುವಾಗುತ್ತವೆ. ಒಂದು ಕಡೆ ದುಷ್ಕರ್ಮಗಳು, ದುಷ್ಟಸಂಸ್ಕಾರಗಳು, ಸಂಶಯ, ಭಗವಂತನಲ್ಲಿ ಸಂದೇಹ, ಇತ್ಯಾದಿಗಳು ನಿವೃತ್ತಿಯಾದಂತೆ ಮತ್ತೊಂದೆಡೆ ಸುಸಂಸ್ಕಾರಗಳು, ಸಚ್ಚಿಂತನೆಗಳು ಬೇರು ಬಿಡಲು ಶುರುವಾಗುತ್ತವೆ. ಇದೇ ಉತ್ತಮ ಭಕ್ತಿಯ ಪ್ರಾರಂಭದ ಸಂಕೇತ.

ನಾವು ಪ್ರಾರಂಭಿಸಿದ್ದು ಸಾಮಾನ್ಯ ಭಕ್ತಿಯಿಂದ, ಅಂದರೆ ಎರಡು ಊದಿನಬತ್ತಿಯಿಂದ. ಆದರೆ ನಾವು ಬಹಳ ಶೀಘ್ರವಾಗಿ ಉತ್ತಮ ಭಕ್ತಿಯ ಸ್ಥಿತಿಗೆ ಬಂದಿದ್ದೇವೆ. ನಮಗೆ ದೇವರು ಇದನ್ನು ಮಾಡಲಿ ಅದನ್ನು ಮಾಡಲಿ, ಇದನ್ನು ಕೊಡಲಿ, ದೇವರು ಯಾಕೆ ಮಾಡಲಿಲ್ಲ, ಇತ್ಯಾದಿ ಚಿಂತೆಗಳಿಗಿಂತ, ''ಹೇ ಪ್ರಭು, ನಿನ್ನ ಕೃಪೆ ಹೇಗೆ ಪಡೆಯುವುದು? ನಿನ್ನನ್ನು ಹೇಗೆ ಒಲಿಸಿಕೊಳ್ಳುವುದು? ನಾನು ಏನು ಮಾಡಿದರೆ ನಿನಗೆ ಪ್ರಿಯವಾಗುತ್ತದೆ?'' ಇತ್ಯಾದಿ ಚಿಂತೆಗಳೇ ಹೆಚ್ಚು ಬರುತ್ತವೆ. ಮನೆಯಲ್ಲಿ ತೊಂದರೆ ಇರುತ್ತದೆ, ಮಗನಿಗೆ ಇನ್ನೂ ಒಳ್ಳೆಯ ಕೆಲಸವಿಲ್ಲ, ಮಗಳಿಗೆ ಮದುವೆಯಾಗಿಲ್ಲ ಇವೆಲ್ಲ ಸಮಸ್ಯೆಗಳು ಇದ್ದರೂ ಉತ್ತಮಾ ಭಕ್ತಿಯ ಮಾರ್ಗದಲ್ಲಿರುವ ಪ್ರಬುದ್ಧ ವ್ಯಕ್ತಿ ದೇವರನ್ನು ನಿಂದಿಸಿ ಹೀಯಾಳಿಸುವುದಿಲ್ಲ. ಈ ಚಿಂತೆಗಳು ಮನಸ್ಸಿನಲ್ಲಿ ಇದ್ದರೂ ಮನಸ್ಸು ಈಗ ಹಿಂದಿನ ರೀತಿ ಈಶ್ವರನ ಜೊತೆ ವ್ಯಾಪಾರ ಮಾಡುವ ದೃಷ್ಟಿಯಿಂದ ಇವುಗಳನ್ನು ನೋಡುವುದಿಲ್ಲ. **'ರಕ್ಷಿಷ್ಯತಿ ಇತಿ ವಿಶ್ವಾಸಃ'**. ದೇವರಿದ್ದಾನೆ ನೋಡಿಕೊಳ್ಳುತ್ತಾನೆ ಎಂಬ ವಿಶ್ವಾಸ ಮೆಲ್ಲಮೆಲ್ಲನೆ ಧೃಢವಾಗುತ್ತಾ ಹೋಗುತ್ತದೆ. ''ನಾನು ಇಷ್ಟು ಕರೆದರೂ ಯಾತಕ್ಕೆ ನನ್ನ ಮಗನಿಗೆ ಕೆಲಸ ಸಿಗಲಿಲ್ಲ?'' ಎಂಬ ಆರೋಪಕ್ಕಿಂತ, ''ಪ್ರಭು, ಈ ಮನೆ ತಮ್ಮದು. ಈ ಮಕ್ಕಳು ಪರಿವಾರ ಎಲ್ಲ ನಿಮ್ಮವರು. ಇವರಿಗೆ ಯಾವುದು ಒಳ್ಳೆಯದೋ ಅದನ್ನು ಮಾಡಿ'' ಎಂಬ ಪ್ರಾರ್ಥನೆ ಒಳಗಿನಿಂದ ಬರುತ್ತದೆ. ಇದು ಉತ್ತಮಾ ಭಕ್ತಿ.

ಸಾಮಾನ್ಯ ಭಕ್ತಿಯಲ್ಲಿ ರಾಜಸಿಕತೆಯೂ ಇರುತ್ತದೆ. ''ನಮ್ಮ ಮನೆಯಲ್ಲಿ ಅದ್ದೂರಿಯಿಂದ ಸತ್ಯನಾರಾಯಣ ವ್ರತ, ನಾರಾಯಣ ಪೂಜೆ, ಲಕ್ಷ್ಮೀಪೂಜೆ, ಇತ್ಯಾದಿ ಮಾಡಿದ್ದೇವೆ. ಬಳಸಿದ್ದು ಎಲ್ಲ ಚಿನ್ನದ ಪಾತ್ರೆಗಳೇ'' ಎಂಬ ಗರ್ವಪೂರ್ಣ ಈಶ್ವರಾರಾಧನೆಯ ಹಿಂದೆ ಕಾಮನೆ ಇರುತ್ತದೆ. ಆದರೆ ಉತ್ತಮಾ ಭಕ್ತಿ ಬಂದ ಮೇಲೆ ಮನೆಯಲ್ಲಿ ನಿತ್ಯ ಆರಾಧನೆ ಮಾಡಿದರೂ ಯಾವುದೇ ಕಾಮನೆಯಿಂದಲ್ಲ, ಅತಿ ಸಾಧಾರಣ ವಸ್ತುಗಳನ್ನು ಬಳಸಿ ಆರಾಧನೆ ಮಾಡಿದರೂ ಸಂಕೋಚವಿಲ್ಲ. ಎಲ್ಲವನ್ನೂ ಭಗವಂತನನ್ನು ಪ್ರೀತಿಸುವುದಕ್ಕಾಗಿ ಮಾಡುತ್ತಿರುವುದು ಎಂಬ ಭಾವ. ಇದು ಉತ್ತಮ ಭಕ್ತರ ಲಕ್ಷಣ.

ಒಂದು ಅದ್ಭುತ ವಿಷಯವೆಂದರೆ ಭಗವಂತನಿಗೆ ಕೂಡ ಸ್ವಾರ್ಥವಿಲ್ಲದ ಭಕ್ತಿ ಪ್ರಿಯ. ಉತ್ತಮ ಭಕ್ತರ ಆದರ್ಶದ ಬಗ್ಗೆ ಶ್ರೀಮದ್ಭಾಗವತದಲ್ಲಿ ಒಂದು ಅದ್ಭುತವಾದ ಶ್ಲೋಕವಿದೆ.

**ಅನ್ಯ ಅಭಿಲಾಷಿತಾ ಶೂನ್ಯಂ ಜ್ಞಾನ ಕರ್ಮಾದಿ ಅನಾವೃತಮ್ ।**
**ಆನುಕೂಲ್ಯೇನ ಕೃಷ್ಣಾನುಶೀಲನಂ ಭಕ್ತಿರುತ್ತಮಾ ॥**

ಬೇರೆಲ್ಲ ಸಣ್ಣ ಸಣ್ಣ ಅಭಿಲಾಷೆಗಳು ಹಾಗಿರಲಿ, ಆ ಅಭಿಲಾಷೆಗಳು ಹುಟ್ಟುವ ಮೂಲವನ್ನೇ ಕಿತ್ತೆಸದ ಭಕ್ತರು, ಮತ್ತು, ''ನಾನು

ಮಹಾ ಜ್ಞಾನಿ, ನಾನು ದೊಡ್ಡ ದೊಡ್ಡ ಪೂಜೆ ಇತ್ಯಾದಿಗಳನ್ನು ಏರ್ಪಾಡು ಮಾಡುತ್ತೇನೆ, ಬಹಳ ಹಣ ಖರ್ಚು ಮಾಡುತ್ತೇನೆ, ಚಿನ್ನದ ಪಾತ್ರೆಗಳಲ್ಲಿಯೇ ಪೂಜೆ ಮಾಡುತ್ತೇನೆ'' ಇತ್ಯಾದಿ ಕರ್ಮದ ಅಹಂಕಾರಗಳನ್ನು ಬಿಟ್ಟವರು, ಮತ್ತು ಭಗವಂತನನ್ನು ಅಂತರಂಗ ದಿಂದ, ಹೃದಯದ ಆಳದಿಂದ ಪ್ರೀತಿಸುವವರು ಭಗವಂತನಿಗೆ ಪ್ರಿಯರು. ಮತ್ತೊಂದು ವಿಷಯವನ್ನು ಈ ಶ್ಲೋಕದಿಂದ ತಿಳಿಯ ಬಹುದು. ಶ್ರೀಕೃಷ್ಣ, ಶ್ರೀರಾಮಚಂದ್ರ, ಇತ್ಯಾದಿ ಅವತಾರಪುರುಷ ರನ್ನು ದ್ವೇಷಿಸಿಯೂ ಅವರ ಕೃಪೆಯಿಂದ ಮುಕ್ತಿ ಪಡೆದ ಕೆಲವರ ಘಟನೆಗಳಿವೆ. ಆದರೆ ಅಂತಹ ದ್ವೇಷ ಭಗವಂತನಿಗೆ ಹಿಡಿಸದು. ಯಾರು ಅನುಕೂಲವಾದ ಮಾರ್ಗದಲ್ಲಿ ಅಂದರೆ ಪ್ರೀತಿಯ ಮಾರ್ಗ ದಲ್ಲಿ ಮುಂದುವರಿಯುತ್ತಾರೋ, ಅವರೇ ಭಗವಂತನಿಗೆ ಹೆಚ್ಚು ಪ್ರಿಯರು. ಇದು ಭಗವಂತನದೇ ವಾಣಿ.

ಇಲ್ಲಿಯವರೆಗೂ ಸಾಧಾರಣ ಭಕ್ತಿ ಮತ್ತು ಉತ್ತಮಾ ಭಕ್ತಿಯ ಬಗ್ಗೆ ಓದಿದೆವು. ಈಗ ಪ್ರಶ್ನೆ ಏಳುತ್ತದೆ. ನಾವು ಭಕ್ತರಾಗಬಹುದು, ದೇವರ ನಿತ್ಯಪೂಜೆ ಮಾಡಬಹುದು. ಆದರೆ ನಮ್ಮ ಸಂಸಾರದ ಕಷ್ಟಗಳನ್ನು ಪರಿಹಾರ ಮಾಡದ ಭಕ್ತಿಯ ಉದ್ದೇಶವೇನು? ಯಾಕೆ ಇಂತಹ ಭಕ್ತಿ? ಮರುಪ್ರಶ್ನೆ: ಭಕ್ತಿ ಎಂದರೇನು? ಭಕ್ತಿ ಏಕೆ? ಕೇವಲ ನಮ್ಮ ಜೀವನ ಸುಲಭವಾಗಿರಲಿ, ಸೌಖ್ಯಮಯವಾಗಿರಲಿ ಎಂದೆ? ಅಥವಾ ಭಕ್ತಿಯ ಉದ್ದೇಶ ಮತ್ತೇನಾದರೂ ಇದೆಯೆ? ನಮ್ಮ ಪರಿ ವಾರದ ಜನರು, ನಾವು ಸುಖವಾಗಿರಲಿ ಎಂದೇ ಈಶ್ವರನ ಆರಾಧನೆ ಮಾಡಿದ್ದ ಪಕ್ಷದಲ್ಲಿ ಭಕ್ತಿ ಅತ್ಯಂತ ನಗಣ್ಯ ವಿಷಯವಾಗುತ್ತಿತ್ತು. ಈಶ್ವರನ ಕೆಲಸ ಸರಕಾರಿ ಗುಮಾಸ್ತೆಯ ಕೆಲಸವಾಗಿಬಿಡುತ್ತಿತ್ತು. ಅರ್ಜಿ (application) ಬಂತು, ಸಹಿ ಮಾಡಿದೆ, ಅಷ್ಟರಲ್ಲಿ ಮತ್ತೊಂದು ಅರ್ಜಿ... ಹೀಗೆ. ಈಶ್ವರ-ಗುಮಾಸ್ತನಿಗೆ ಮತ್ತೊಂದು ತಲೆನೋವು ಆಹಾ, ಎರಡು ನಿಮಿಷಗಳ ಮುಂಚೆ ಅದು ಬೇಕು ಎಂದು ಕೇಳಿದ, ಈಗ ಅದು ಬೇಡ ಬೇರೇನೋ ಬೇಕು ಎನ್ನುತ್ತಾನೆ, ಏನು ಮಾಡಲಿ? ಭಕ್ತಿ ಸಣ್ಣ ವಿಷಯವಲ್ಲ.

ಭಕ್ತಿಯನ್ನು ನಾರದ ಮಹರ್ಷಿಗಳು **'ಪರಮಪ್ರೇಮರೂಪಾ'** ಎಂದಿದ್ದಾರೆ. ನಮ್ಮ ಜೀವನದ ಉದ್ದೇಶ ನಮ್ಮ ಪರಿವಾರದ ಜನರ, ಕೆಲಸ-ಕಾರ್ಯ, ಮದುವೆ, ಹಣ ಸಂಪಾದನೆ ಇತ್ಯಾದಿಗಳಿಗೇ ಸೀಮಿತವಲ್ಲ. ನಾವು ದಿವ್ಯಾಂಶಸಂಭೂತರಾದ ಮನುಷ್ಯರೂಪೀ ದೇವತೆಗಳು. ಪ್ರಾಣಿ-ಪಕ್ಷಿಗಳ ಹಾಗೆ ನಮ್ಮ ನಮ್ಮ ಚಿಕ್ಕ ಗೂಡುಗಳಿಗೆ ಜೀವನ ಸೀಮಿತವಲ್ಲ. ಜೀವನದ ಉದ್ದೇಶ ಹೇಗೆ ಉನ್ನತವಾಗಿರ ಬೇಕೋ ಹಾಗೆಯೇ ಭಕ್ತಿಯ ಉದ್ದೇಶವೂ ಉನ್ನತವಾಗಿರಬೇಕು. ಹಾಗಾದರೆ ನಿಜವಾದ ಭಕ್ತಿ ಏನು? ಭಕ್ತಿ ಎಂದರೆ ಪ್ರೇಮ. ಸಾಧಾರಣ ವಸ್ತುಗಳಲ್ಲಿ, ಪರಿವಾರದ ಜನರಲ್ಲಿ, ಇಟ್ಟಿರುವ ಪ್ರೇಮ ಪ್ರತಿನಿತ್ಯ ಬದಲಾಗುತ್ತಿರುತ್ತದೆ, ಕಾರಣ ಪರಿವಾರದ ಜನರು ಬದಲಾಗುತ್ತಿರು ತ್ತಾರೆ, ಜಗತ್ತು ಬದಲಾಗುತ್ತಿರುತ್ತದೆ. ಎಲ್ಲವೂ ಪರಿವರ್ತನಶೀಲ. ಆದರೆ ಈ ವಿಶ್ವ ಬ್ರಹ್ಮಾಂಡದಲ್ಲಿ ಒಂದು ವಸ್ತು ಚಿರಶಾಶ್ವತ. ಅದೇ ಭಗವಂತ ಅಥವಾ ದಿವ್ಯಚೈತನ್ಯ. ಆ ಭಗವಂತನಿಗೆ ಹಲವಾರು ಹೆಸರು, ಹಲವಾರು ರೂಪ, ಹಲವಾರು ನಾಮಗಳು. ಆ ಭಗವಂತ ನಮ್ಮ ಹೊರಗೆ, ನಮ್ಮೊಳಗೆ ಎಲ್ಲೆಲ್ಲಿಯೂ ಇದ್ದಾನೆ. ಅವನೇ ನಮ್ಮ ಗುರಿ, ಧ್ಯೇಯ. ಈ ಜಗತ್ತಿನಲ್ಲಿ ನಾವು ಬಂದಿರುವುದು ನಮ್ಮೊಳ ಗಿರುವ ಆ ಭಗವಂತನನ್ನು ಪ್ರಕಾಶಪಡಿಸಿ, ಕರ್ಮ-ಬಂಧನದಿಂದ ಬಿಡುಗಡೆ ಪಡೆದು, ಮುಕ್ತರಾಗಲೆಂದು. ಅಥವಾ ಈಶ್ವರನ ಸೇವೆ ಮಾಡಲೆಂದು. ಇದನ್ನು ಸಾಧಿಸುವ ಮಾರ್ಗವೇ ಭಕ್ತಿ. ಸಾಮಾನ್ಯ ಭಕ್ತಿಯ ನಂತರ ಉತ್ತಮಾ ಭಕ್ತಿ, ಆ ನಂತರ ಮತ್ತೂ ಒಂದು ಹಂತ ಮೇಲಿನ ಭಕ್ತಿ. ಭಗವಂತನನ್ನು ನಮ್ಮ ಪರಿವಾರದವರಂತೆ ಪ್ರೀತಿಸು ವುದನ್ನೇ ನಮ್ಮ ಶಾಸ್ತ್ರಗಳು ಭಕ್ತಿ ಎಂದು ಕರೆಯುತ್ತವೆ. ಅವನನ್ನು ಪ್ರೀತಿಸಿದರೆ ಎಲ್ಲವನ್ನೂ ಕಂಡಂತೆ, ಎಲ್ಲವನ್ನೂ ಪಡೆದಂತೆ, ಎಲ್ಲ ವನ್ನೂ ಪ್ರೀತಿಸಿದಂತೆ.

**ಯಂ ಲಬ್ಧ್ವಾ ಚ ಅಪರಂ ಲಾಭಂ ಮನ್ಯತೇ ನಾಧಿಕಂ ತತಃ ।**
**ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥**

ಭಗವಂತನೆಂಬ ಆ ದಿವ್ಯ ಸಂಪತ್ತನ್ನು ನಮ್ಮದಾಗಿಸಿಕೊಂಡರೆ ಮುಗಿಯಿತು. ಜಗತ್ತಿನ ಎಷ್ಟೇ ದೊಡ್ಡ ಕಷ್ಟ, ಅದೆಷ್ಟೇ ದುಃಖ ಬಂದರೂ ನಾವು ತಲ್ಲಣಿಸುವುದಿಲ್ಲ.ಸಮಸ್ಯೆಗಳು ಭಗವಂತನ ಪರೀಕ್ಷೆ ಗಳಾಗಿ ಪರಿಣಮಿಸುತ್ತವೆ. ದಿನದಿಂದ ದಿನಕ್ಕೆ ಈಶ್ವರನಲ್ಲಿ ಎಲ್ಲರಿಗಿಂತ ಹೆಚ್ಚು ನಮ್ಮವನು ಎಂಬ ಶ್ರದ್ಧೆ ದೃಢವಾಗುತ್ತದೆ. 'ಎಲ್ಲರನು ಸಲಹು ವನು ಇದಕೆ ಸಂಶಯವಿಲ್ಲ' ಎಂಬ ದಾಸವಾಣಿ ಅಕ್ಷರಶಃ ಸತ್ಯ ಎಂದು ಅರಿವಾಗುತ್ತದೆ. 'ಎಷ್ಟು ಕಾಲ ನಾನು ಸಣ್ಣ ಸಣ್ಣ ವಿಷಯಗಳನ್ನು ಕುರಿತು ಸಮಯ ನಷ್ಟ ಮಾಡಿಕೊಂಡೆನಲ್ಲ' ಎಂಬ ಚಿಂತೆ ಬರುತ್ತದೆ.

ಸಮುದ್ರದಲ್ಲಿ ತತ್ತರಿಸುತ್ತಿದ್ದ ನೌಕೆ ತೀರವನ್ನು ಸೇರಿದಂತೆ, ಭಗ ವಂತನನ್ನು ಪ್ರೀತಿಸಲು ಯಾವಾಗ ನಾವು ಪ್ರಾರಂಭ ಮಾಡು ತ್ತೇವೋ, ಯಾವಾಗ ಭಗವಂತ ನಮ್ಮ ಜೀವನದ ಕೇಂದ್ರಬಿಂದು ವಾಗುತ್ತಾನೋ ಆಗ ಸಂಸಾರದ ಕಷ್ಟಗಳಾಗಲಿ, ಜಗತ್ತಿನ ತೊಂದರೆ ಗಳಾಗಲಿ, ಎಲ್ಲವೂ ಲಘುವಾಗಿ ಹೋಗುತ್ತವೆ. ಇದು ನಾಟಕೀಯ ವಾದ ಮಾತಲ್ಲ. ಇದು ಕಲ್ಪನೆ ಅಲ್ಲ. ಇದು ಶಾಶ್ವತವಾದ ಸತ್ಯ. ಇದಕ್ಕೆ ಪ್ರಮಾಣ ಬೇಕೆಂದರೆ ಒಂದು ಕೆಲಸ ಮಾಡಿರಿ. YouTube ಗೆ ಹೋಗಿ ಭಕ್ತ ಪ್ರಹ್ಲಾದ, ಭಕ್ತ ಕುಂಬಾರ, ಭಕ್ತ ಕನಕದಾಸ, ಇತ್ಯಾದಿ ಸಿನಿಮಾಗಳನ್ನು ನೋಡಿರಿ. ಆ ಎಲ್ಲ ಮಹನೀಯರು ಎಷ್ಟು ಕಷ್ಟ ಪಟ್ಟರು, ಆದರೆ ಭಗವಂತ ಅವರನ್ನು ಹೇಗೆ ರಕ್ಷಿಸಿದ ಎಂಬುದನ್ನು ಆ ಸಿನಿಮಾಗಳಲ್ಲಿ ಬಹಳ ಚೆನ್ನಾಗಿ ತೋರಿಸಲಾಗಿದೆ. ಆ ಘಟನೆಗಳು ಬರಿಯ ಸಿನಿಮಾವಲ್ಲ, ಆ ಮಹಾಪುರುಷರುಗಳ ನಿಜಜೀವನದಲ್ಲಿ ಇವೆಲ್ಲ ಘಟಿಸಿದ್ದವು.

ಭಗವಂತನನ್ನು ಪ್ರೀತಿಸುವುದೇ ಭಕ್ತಿಯ ಮೂಲ ಉದ್ದೇಶ. ಭಗವಂತನನ್ನು ನಮ್ಮವರನ್ನಾಗಿ ಮಾಡಿಕೊಳ್ಳುವುದೇ ನಮ್ಮ ಜೀವನದ ಉದ್ದೇಶ. ನಾವು ಮಾಡುವ ಸಾಮಾನ್ಯ ಭಕ್ತಿಯಾಗಲಿ, ವ್ಯಾಪಾರ-ವ್ಯವಹಾರಗಳಾಗಲಿ, ಧನಸಂಪಾದನೆಯಾಗಲಿ ಎಲ್ಲವೂ ಬೇಕು. ಎಲ್ಲಕ್ಕೂ ಸ್ಥಾನವಿದೆ. ಎಲ್ಲವೂ ಗುರುತ್ವಪೂರ್ಣವಾದ ಕೆಲಸಗಳು. ಆದರೆ ಅವುಗಳೇ ಜೀವನದ ಧ್ಯೇಯವಲ್ಲ, ಗುರಿಯಲ್ಲ. ಅವುಗಳ ಮುಖಾಂತರ ನಾವು ನಮ್ಮ ಜೀವನದ ನಿಜವಾದ ಉದ್ದೇಶದ ಕಡೆಗೆ ಹೋಗುತ್ತಿದ್ದೇವೆ. ಮತ್ತೊಂದು ಗುರುತ್ವಪೂರ್ಣವಾದ ಸತ್ಯ, ಮೇಲೆ ಹೇಳಿದ ಎಲ್ಲ ಕೆಲಸಗಳನ್ನೂ ದೈವೀಕರಿಸಬಲ್ಲೆವು. ಅತಿ ಸಾಧಾರಣ ವಾದ ಕಸಗುಡಿಸುವ ಕೆಲಸದಿಂದ ಹಿಡಿದು ಪರಿವಾರದ ಜನರ ರಕ್ಷಣೆಯ ಕೆಲಸವೂ ಭಗವಂತನ ಪೂಜೆಯಾಗಿ ಪರಿವರ್ತಿತವಾಗ ಬಹುದು. ಇದು ಭಕ್ತಿಯ ಅದ್ಭುತ ಸತ್ಯ.

ಸಾಮಾನ್ಯ ಭಕ್ತಿಯಿಂದ ಉತ್ತಮಾ ಭಕ್ತಿ, ಉತ್ತಮಾ ಭಕ್ತಿಗಾಗಿ ಶ್ರದ್ಧೆ, ಸಾಧುಸಂಗ, ಇತ್ಯಾದಿಗಳು ಒಂದಾದ ಮೇಲೆ ಒಂದು ಆಗಲು ಶುರುವಾದಾಗ ಅನರ್ಥ ನಿವೃತ್ತಿಯಾಗುತ್ತದೆ. ಅನರ್ಥ ನಿವೃತ್ತಿ ಅಂದರೆ ನಮ್ಮ ಕುಸಂಸ್ಕಾರಗಳು ನಿವೃತ್ತವಾಗುತ್ತವೆ. '**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮನನ್ನು ಒಲಿಸುವ ಪರಿ.**' ಅನರ್ಥಗಳು ನಿವೃತ್ತವಾಗುತ್ತಿದ್ದ ಹಾಗೆಯೇ ಭಗವಂತನ ಕಡೆ ಮನಸ್ಸು ಹೆಚ್ಚು ಹೆಚ್ಚಾಗಿ ಓಡಲು ಪ್ರಾರಂಭಿಸುತ್ತದೆ. ಆಗ ಬರುವುದು ಒಂದು ಅದ್ಭುತ ಬೆಳವಣಿಗೆ, ಪ್ರಗತಿ. ಅದು ಭಗವಂತನ ಬಗ್ಗೆ ಇಷ್ಟುದಿನ ನಮ್ಮಲ್ಲಿದ್ದ ಕಲ್ಪನೆಗಳು, ಭಾವನೆಗಳು ಬದಲಾಗುವುದು. ಭಗವಂತ ಎಲ್ಲೋ ಸ್ವರ್ಗದಲ್ಲಿ ಅಥವಾ ವೈಕುಂಠದಲ್ಲಿ ಕುಳಿತಿಲ್ಲ, ಅವನು ನಮ್ಮವನು, ನಮ್ಮ ಅಂತರ್ಯಾಮಿ, ಸರ್ವವ್ಯಾಪಿ ಇತ್ಯಾದಿ ವಿಚಾರಗಳು ದೃಢವಾಗುತ್ತವೆ. ಬದಲಾದ ಭಗವಂತನ ಮೇಲಿನ ಚಿಂತನೆಗೆ ಪೂರಕವಾಗಿ ನಮ್ಮ ಭಕ್ತಿಯಲ್ಲಿ ಕೂಡ ಸ್ವಲ್ಪ ಪರಿವರ್ತನೆ ಉಂಟಾಗುತ್ತದೆ. ಏನದು ಪರಿವರ್ತನೆ?

ಭಗವಂತನನ್ನು ಪ್ರೀತಿಸಬೇಕಾದರೆ ಏನಾದರೂ ಒಂದು ಭಾವ ಇರಬೇಕು ಎಂದು ನಮ್ಮ ಶಾಸ್ತ್ರಗಳು ಹಾಗೂ ಭಗವಾನ್ ಶ್ರೀರಾಮಕೃಷ್ಣರು ಮತ್ತೆ ಮತ್ತೆ ಹೇಳುತ್ತಾರೆ. ಭಗವಂತ ನಮ್ಮವನಾಗಬೇಕು, ನಾವು ಅವನವನಾಗಬೇಕು. ನಮ್ಮವನೆಂದರೆ ನಮ್ಮ ನೆಂಟನಾಗಬೇಕು. ನೆಂಟನೆಂದರೆ ತಾಯಿ ತಂದೆ ಅಣ್ಣ ತಂಗಿ ತಮ್ಮ ಪ್ರಭು ಒಡೆಯ ಇತ್ಯಾದಿಗಳು. ಭಗವಂತನನ್ನು ನಮ್ಮ ತಾಯಿಯಾಗಿ ನೋಡುವುದು ಅತ್ಯಂತ ಶ್ರೇಷ್ಠವಾದ ಮಾರ್ಗ ಎಂದು ಶ್ರೀರಾಮಕೃಷ್ಣರು ತಿಳಿಸುತ್ತಾರೆ. ಮತ್ತೊಂದು ಪರಮಾದ್ಭುತವಾದ ಪಥ ಭಗವಂತನನ್ನು ನಮ್ಮ ಧಣಿ ಅಥವಾ ನಮ್ಮ ಒಡೆಯನನ್ನಾಗಿ ಮಾಡಿಕೊಂಡು ನಾವು ಅವನ ದಾಸನಾಗುವುದು. '**ದಾಸನ ಮಾಡಿಕೋ ಎನ್ನ ಸ್ವಾಮಿ, ಸಾಸಿರ ನಾಮದ ವೆಂಕಟರಮಣಾ!**' ಭಗವಂತನ ದಾಸ ಅಥವಾ ಮಗು ಇತ್ಯಾದಿ ಆಗುವುದು ಒಂದೆರಡು ದಿನದಲ್ಲಿ ಸಾಧ್ಯವಲ್ಲ. ಸ್ವಲ್ಪ ಶ್ರದ್ಧೆಯಿಂದ, ನಿಷ್ಠೆಯಿಂದ ನಿಧಾನವಾಗಿ ಮುನ್ನಡೆಯಬೇಕು. ಭಕ್ತಿ ಶಾಸ್ತ್ರಗಳು **ರಾಗಾನುಗಾ** ಮತ್ತು **ರಾಗಾತ್ಮಿಕಾ** ಎಂಬ ಎರಡು ಹಂತಗಳ ಬಗ್ಗೆ ತಿಳಿಸುತ್ತದೆ. ಉತ್ತಮ ಭಕ್ತರು ಶ್ರದ್ಧೆ ಮತ್ತು ಸಾಧುಸಂಗ ಮಾಡಿದ ನಂತರ ಅಂತಃಶುದ್ಧಿ ಬಹಿಶ್ಶುದ್ಧಿಯಾದರೆ ಮುಂದಿನ ಹಂತ ರಾಗಾನುಗಾ ಭಕ್ತಿಯ ಪರಿಪಾಲನೆ. ಹೌದು, ರಾಗಾನುಗಾ ಭಕ್ತಿ. ರಾಗಾನುಗಾ ಎಂದರೆ ಭಗವಂತನ ಭಕ್ತರನ್ನು ಅನುಕರಿಸುವುದು. ಕೃಷ್ಣನ ಸಖರು, ಯಶೋದೆ, ನಂದಗೋಪರೇ ಮೊದಲಾದವರ ಜೀವನವನ್ನು ಓದಿ, ಸಾಧುಸಂಗದ ಸಹಾಯದಿಂದ ತಿಳಿದು, ಅವರಂತೆ ಕೃಷ್ಣನನ್ನು ಅಥವಾ ಭಗವಂತನನ್ನು ಪ್ರೀತಿಸಲು ಪ್ರಯತ್ನಿಸುವುದು. ಇದು ರಾಗಾನುಗಾ. ಹಾಗೆ ಮಾಡುತ್ತಾ ಮಾಡುತ್ತಾ ಮನಸ್ಸಿನಲ್ಲಿ ಭಕ್ತಿ ಹೆಚ್ಚುತ್ತಾ ಹೋಗುತ್ತದೆ. ಒಂದು ವಿಷಯ ಸರ್ವದಾ, ಸರ್ವಕಾಲದಲ್ಲಿಯೂ ನೆನಪಿಡಬೇಕು. ಅದೇನೆಂದರೆ, ಭಗವಂತನನ್ನು ಪ್ರೀತಿಸಲು ನಾವು ಮಾತ್ರ ಪ್ರಯತ್ನ ಮಾಡುತ್ತಿಲ್ಲ. ಅಂತರ್ಯಾಮಿಯಾದ, ಸರ್ವವ್ಯಾಪಿಯಾದ ಭಗವಂತನೂ ಕೂಡ ನಮ್ಮನ್ನು ಪ್ರೀತಿಸಲು ಅನವರತ ಪ್ರಯತ್ನ ಮಾಡುತ್ತಿದ್ದಾನೆ. ಹಾಗಾಗಿ ಎರಡು ಕಡೆಯಿಂದಲೂ ಆಯಸ್ಕಾಂತಗಳ ಎಳೆತ ಎಷ್ಟು ಪ್ರಬಲ ಎಂದರೆ ರಾಗಾನುಗಾಭಕ್ತಿ ಮತ್ತೊಂದು ಉನ್ನತ ಹಂತಕ್ಕೆ ತಲುಪಿ ರಾಗಾತ್ಮಿಕಾ ಆಗಿಬಿಡುತ್ತದೆ. ರಾಗಾತ್ಮಿಕಾ ಭಕ್ತಿ? ಹಾಗಂದರೇನು? ಭಕ್ತನಿಗೆ ಇನ್ನು ಮುಂದೆ ಯಾವುದೇ ಮಹಾಪುರುಷರನ್ನು ಅನುಕರಣೆ ಮಾಡಬೇಕಾಗಿಲ್ಲ. ಒಳಗಿನಿಂದ ಸ್ವತಃ ಸ್ಫೂರ್ತವಾಗಿ ಭಕ್ತಿ ಉಕ್ಕಿ ಹರಿಯುತ್ತದೆ. ಭಗವಂತ ನನ್ನವನು. ನನ್ನ ಧಣಿ, ಅಥವಾ ತಂದೆ, ಅಥವಾ ತಾಯಿ. ಭಗವಂತನಿಗೆ ತಿನ್ನಿಸಬೇಕು, ನಿದ್ರೆ ಮಾಡಿಸಬೇಕು, ಭಗವಂತನ ಜಪ ಮಾಡಬೇಕು, ಅಲಂಕಾರ ಮಾಡಬೇಕು, ಸೇವೆ ಮಾಡಬೇಕು, ಅವನ ಜೀವನದ ಬಗ್ಗೆ ತಿಳಿಯಬೇಕು.. ಇದೇ ಚಿಂತೆ ಸರ್ವದಾ ಮನಸ್ಸಿನಲ್ಲಿ ಬರುತ್ತಿರುತ್ತದೆ. ಇದೇ ರಾಗಾತ್ಮಿಕಾ ಭಕ್ತಿ. ನಾವು ಈ ಹಂತಕ್ಕೆ ಬಂದ ಮೇಲೆ ಇನ್ನು ಚಿಂತೆ ಇಲ್ಲ. ಕಬ್ಬಿಣವನ್ನು ಹೇಗೆ ಅಯಸ್ಕಾಂತ ಸೆಳೆಯುತ್ತದೆಯೋ ಹಾಗೆ ನಮ್ಮನ್ನು ಭಗವಂತ ತನ್ನೆಡೆಗೆ ಸೆಳೆಯುತ್ತಾನೆ . ಇನ್ನು ಮುಂದೆ ಜೀವನ ಧನ್ಯವಾಗುತ್ತದೆ. ಶ್ರೀ ರಾಮಕೃಷ್ಣರು ಹೇಳುವಂತೆ ಭಗವಂತನಲ್ಲಿ ದಾಸ್ಯಭಾವ ಅಥವಾ ಸಂತಾನಭಾವ ಇಟ್ಟುಕೊಂಡು ಭಗವಂತನನ್ನು ನಮ್ಮ ಧಣಿ ಅಥವಾ ತಾಯಿಯಂತೆ ಕಂಡರೆ ಭಕ್ತಿಮಾರ್ಗದಲ್ಲಿ ಪ್ರಗತಿ ಬಹಳ ಬೇಗ ಆಗುತ್ತದೆ.

ಇನ್ನು ಮುಂದೆ ಹೆಚ್ಚು ಕಷ್ಟವಿರುವುದಿಲ್ಲ. ಆನಂದವೇ ಆನಂದ. ಎಲ್ಲಿಂದ ಬರುತ್ತದೆ ಈ ಆನಂದ? ಒಬ್ಬ ವ್ಯಕ್ತಿ ಎರಡು ತಲೆಮಾರುಗಳಿಂದ ಒಂದು ಗುಡಿಸಲಿನಲ್ಲಿ ವಾಸಿಸಿದ್ದನಂತೆ. 'ಅಯ್ಯೋ ನಾವು ಬಡವರು, ನಾವು ಬಡವರು' ಎಂದು ಅಳುತ್ತಿದ್ದನಂತೆ. ಆದರೆ ಅವನ ಮುರುಕಲು ಮಂಚ ಎಲ್ಲಿತ್ತೋ ಅದರ ಕೆಳಗೆ ಮೂರು ಕೊಡಗಳ ಭರ್ತಿ ಚಿನ್ನದ ನಾಣ್ಯಗಳು ಇದ್ದವಂತೆ. ನಮ್ಮೊಳಗೂ ಅನಂತ ಆನಂದದ ಸಂಪತ್ತು ಅಡಗಿದೆ, ಹೊರಗೆ ಬರಲು ಕಾದು ಕಾದು ಕಣ್ಣೀರಿಡುತ್ತಿದೆ. ನಾವು ನಮ್ಮ ಅಂಗಡಿ, ನಮ್ಮ ಪರಿವಾರ, ಕೆಲಸ, ಮದುವೆ, ಇತ್ಯಾದಿ ಚಿಕ್ಕ ಚಿಕ್ಕ ವಿಷಯಗಳಲ್ಲಿಯೇ ಬಿಜಿಯಾಗಿದ್ದು ಅನೇಕ ಜನ್ಮಗಳನ್ನು ವ್ಯರ್ಥ ಮಾಡಿದ್ದೇವೆ. ಅವುಗಳನ್ನು ಬಿಟ್ಟು ಮತ್ತೇನನ್ನೂ ಚಿಂತಿಸದಿದ್ದರೆ ಆ ಆನಂದ ಹೇಗೆ ಪ್ರಕಟವಾಗಬೇಕು? ಆನಂದ ಇದ್ದೂ ಇಲ್ಲವಾದ್ದರಿಂದ ಕ್ರಿಕೆಟ್, ಸಿನಿಮಾ, ಇತ್ಯಾದಿಗಳ ಮೂಲಕ ಕ್ಷಣಿಕ ಸುಖ ಪಡೆಯಲು ನಾವು ಪ್ರಯತ್ನಿಸುತ್ತಿರುತ್ತೇವೆ. ಒಮ್ಮೆ ಭಗವಂತನ ಕಡೆಗೆ ಮನಸ್ಸು ಸಂಪೂರ್ಣವಾಗಿ ಹೋದಾಗ ಒಳಗಿನಿಂದ ಆನಂದ ನಿಶ್ಚಿಂತೆಯಿಂದ ಹೊರಗೆ ಬರಲು ಶುರುವಾಗುತ್ತದೆ. ಇದು ಭಕ್ತಿ.

ಕಡೆಯಲ್ಲಿ ಒಂದು ಮಾತು. ಈಶ್ವರ ಯಾರಾದರೂ ಒಂದು ಮನೆ ಅಥವಾ ಒಂದು ಕಾರು ಇತ್ಯಾದಿಯನ್ನು ಕೇಳಿದರೆ ಅಯ್ಯೋ, ಎಲ್ಲಿಂದ ತರಲಿ ಎಂದು ಚಿಂತಿಸುವುದಿಲ್ಲ. ವಿಶ್ವ ಬ್ರಹ್ಮಾಂಡಗಳು, ಕೋಟಿ ಕೋಟಿ ನಕ್ಷತ್ರಗಳು ಅವನ ಪಾದದ ಧೂಳಿಸಮಾನ. ಒಂದು ಮನೆ ಕೊಡುವುದು ದೊಡ್ಡ ವಿಷಯವಲ್ಲ. ಆದರೆ ಈ ಎರಡು ದಿನದ ವಸ್ತುಗಳಿಗಿಂತ ಆ ವಸ್ತುಗಳ ಮಾಲೀಕರನ್ನೇ ಯಾಕೆ ಕೇಳಬಾರದು? ಹಾಗಾಗಿ ಭಗವಂತನಿಗೆ 'ನನಗೆ ಏನೂ ಬೇಡ, ನೀನೇ ಬೇಕು' ಎನ್ನುವ ಭಕ್ತರು ಹೆಚ್ಚು ಪ್ರಿಯರು.

ಈ ರಾಗಾತ್ಮಿಕಾ ಭಕ್ತಿ ಜಾಗೃತವಾದ ಮೇಲೆ ಭಕ್ತರ ಜೀವನ ಅಪೂರ್ವವಾದ ಆನಂದಮಯ ಜೀವನವಾಗುತ್ತದೆ. ಇನ್ನು ಮುಂದಿನ ಹಂತಗಳನ್ನು ಸಹಜವಾಗಿ ಸುಲಲಿತವಾಗಿ ಭಕ್ತರು ತಲುಪುತ್ತಾರೆ. ಭಕ್ತ-ಭಗವಂತ ಬೇರೆ ಬೇರೆ ಎಂಬ ಅಂತರವೂ ಹೋಗಿಬಿಡುತ್ತದೆ. ಇದೇ ಭಕ್ತಿಮಾರ್ಗದ ಅದ್ಭುತ ಮಹತ್ವ.